ಪ್ರಧಾನ ಸಿವಿಲ್ ಮತ್ತು ಜೆಎಮ್ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **963/ 2019**

ಫಿರ್ಯಾದಿದಾರಃ ಕರ್ನಾಟಕ ಸರ್ಕಾರ ಪರವಾಗಿ ಅಬಕಾರಿ
ಪೋಲಿಸ್ ಠಾಣೆ ಯಾದಗಿರಿ.

// ವಿರುದ್ಧ //

ಆರೋಪಿತರುಃ **1.** ಮಲ್ಲಯ್ಯ ತಂದೆ ಅಯ್ಯಪ್ಪ,
ವಃ **27** ವರ್ಷ, ಸಾಃ ಕಾಳಬೇಳಗುಂದಿ ಗ್ರಾಮ,
ತಾಃ ಮತ್ತು ಜಿಃ ಯಾದಗಿರಿ.

**2.** ಬನ್ನಪ್ಪತ ಂದೆ ಈರದಿಮ್ಮಣ್ಣ,
ವಃ **31** ವರ್ಷ, ಸಾಃ ಕಾಳಬೇಳಗುಂದಿ ಗ್ರಾಮ,
ತಾಃ ಮತ್ತು ಜಿಃ ಯಾದಗಿರಿ.

ದಂಡ ಪ್ರಕ್ರೀಯಾ ಸಂಹಿತೆ ಕಲಂಃ **313** ರಡಿಯಲ್ಲಿ ಆರೋಪಿಯ ಹೇಳಿಕೆ.

ಪ್ರಃ 01- ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀನು ಕೇಳಿರುವೆಯಾ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 02-ಚಾಸಾ-3/ಪ್ರಾಸಾ-2 ಶ್ರೀ ನೀಲಕಂಠಪ್ಪ ಕತ್ತಿ ತಂದೆ ಶಾಂತಪ್ಪ, ಅಬಕಾರಿ ರಕ್ಷಕ, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 05.04.2019 ರಂದು ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ನಾನು ಚಾಸಾಃ1 ರವರೊಂದಿಗೆ ಸೈದಾಪೂರ ಗ್ರಾಮದ ಅಸು-ಪಾಸಿನಲ್ಲಿ ಗಸ್ತು ಮಾಡುತ್ತಿದ್ದಾಗ ಸಾಃ 7-15 ಗಂಟೆಗೆ ನೀಲಹಳ್ಳಿ ಗ್ರಾಮದ ಹತ್ತಿರ ಅಕ್ರಮ ಮದ್ಯ ಸಾಗಾಟ ನಡೆದಿರುವ ಬಗ್ಗೆ ಚಾಸಾಃ 1 ರವರಿಗೆ ಮಾಹಿತಿ ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 03-ಚಾಸಾ-3/ಪ್ರಾಸಾ-2 ರವರು ಮುಂದುವರೆದು, ನಾವುಗಳು ನೀಲಹಳ್ಳಿ ಕ್ರಾಸ್ ಹತ್ತಿರ ಹೋಗಿ ಸಾರ್ವಜನಿಕರನ್ನು ಪಂಚರಾಗಿ ಬರುವಂತೆ ಕೇಳಿಕೊಂಡಾಗ ಚಾಸಾಃ 2 ರವರು ಮಾತ್ರ ಒಪ್ಪಿಕೊಂಡು ನಮ್ಮೊಂದಿಗೆ ಬಂದಿದ್ದರು. ಆದ್ದರಿಂದ ನನ್ನನ್ನು ಇನ್ನೊಬ್ಬ ಪಂಚನನ್ನಾಗಿ ನೇಮಕ ಮಾಡಿಕೊಂಡಿದ್ದರು. ನಂತರ ರಸ್ತೆಗಾವಲು ಮಾಡುತ್ತಿದ್ದಾಗ ಸೈದಾಪೂರ ಕಡೆಯಿಂದ ಒಂದು ಬೈಕ್ ಬರುತ್ತಿರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 04-ಚಾಸಾ-3/ಪ್ರಾಸಾ-2 ರವರು ಮುಂದುವರೆದು, ಸದರಿ ಬೈಕನ್ನು ತಡೆದು ನಿಲ್ಲಿಸಿದಾಗ ಬೈಕ್ ಸವಾರರು ಗಾಬರಿಗೊಂಡಿರುವುದು ಕಂಡುಬಂದಿದ್ದರಿಂದ ಸಂಶಯ ಬಂದು ಚಾಸಾಃ 1 ರವರು ಸ್ಥಳದಲ್ಲಿ ಶೋಧನಾ ಪತ್ರ ತಯಾರಿಸಿಕೊಂಡು ಪರಿಶೀಲನೆ ಮಾಡಿದಾಗ ಬೈಕಿನ ಹಿಂಬದಿ ಸವಾರ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 330 ಮಿಲಿಯ 24 ಕೆಎಫ್ ಸ್ಟ್ರಾಂಗ ಬಿಯಾರ್ ಬಾಟಲಿಗಳನ್ನು ಹಾಗೂ ಬೈಕಿನ ಪೆಟ್ರೋಲ್ ಟಾಂಕಿನ ಮೆಲೆ 10 ಲೀ. ಕಲಬೆರಕೆ ಸೇಂದಿ ಇರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 05-ಚಾಸಾ-3/ಪ್ರಾಸಾ-2 ರವರು ಮುಂದುವರೆದು, ಬೈಕ್ ಕಪ್ಪು ಬಣ್ಣದ ಹಿರೋ ಪ್ಯಾಷನ್ ಆಗಿದ್ದು ನೊಂದಣಿ ನಂ.ಕೆಎ07 ಹೆಚ್ ಎಂ 4429 ಆಗಿರುವುದು ಕಂಡುಬಂದಿರುತ್ತದೆ. ಬೈಕ್ ಸವಾರರ ಹೆಸರು ವಿಳಾಸ ಕೇಳಲಾಗಿ ಮಲ್ಲಪ್ಪ ತಂದೆ ಅಯ್ಯಪ್ಪ ಹಾಗೂ ಬಸ್ಸಪ್ಪ ತಂದೆ ಈರ್ ದಿಮ್ಮಣ್ಣ, ಸಾಃ ಕಾಳೆಬೆಳಗುಂದಿ ಎಂದು ತಿಳಿಸಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 06-ಚಾಸಾ-3/ಪ್ರಾಸಾ-2 ರವರು ಮುಂದುವರೆದು, ನಂತರ ಒಂದು ಬಿಯಾರ್ ಬಾಟಲಿಯನ್ನು ಹಾಗೂ ಒಂದು ಲೀಟರ್ ಕಲಬೆರಕೆ ಸೇಂದಿಯನ್ನು ರಾಸಾಯನಿಕ ಪರೀಕ್ಷೆಗೆ ಮಾದರಿಯಾಗಿ ತೆಗೆದುಕೊಂಡಿದ್ದೆವು. ಸ್ಥಳದಲ್ಲಿ ಸಾಃ 7.30 ರಿಂದ 8.30 ವರೆಗೆ ಪಂಚನಾಮೆ ಮಾಡಿರುತ್ತೇವೆ. ನಂತರ ದೊರೆತ ಮು.ಮಾಲು, ಬೈಕ್ ಹಾಗೂ ಆರೋಪಿತರನ್ನು ವಶಕ್ಕೆ ಪಡೆದುಕೊಂಡು ಕಚೇರಿಗೆ ಬಂದಿದ್ದು, ಆ ನಂತರ ಚಾಸಾಃ 1 ರವರು ಸರಕಾರದ ಪರವಾಗಿ ದೂರು ದಾಖಲಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 07-ಚಾಸಾ-4/ಪ್ರಾಸಾ-3 ಶ್ರೀ ಶಿವಶರಣಪ್ಪ ತಂದೆ ಸಂಗಣ್ಣ, ಅಬಕಾರಿ ಪೇದೆ ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 04.05.2019 ರಂದು ಈ ಪ್ರಕರಣದ ಮಾದರಿ ಮು.ಮಾಲನ್ನು

ರಾಸಾಯನಿಕ ಪರೀಕ್ಷೆಗಾಗಿ ರಾಯಚೂರಿನ ಪ್ರಾದೇಶಿಕ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗಿ ಒಪ್ಪಿಸಿ, ದಿಃ 22.05.2019 ರಂದು ವರದಿ ಪಡೆದುಕೊಂಡು ಕಚೇರಿಗೆ ತಂದು ಒಪ್ಪಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 08-ಚಾಸಾ-1/ಪ್ರಾಸಾ-4 ಶ್ರೀ ಜೆಟ್ಟೆಪ್ಪ ತಂದೆ ಭೀಮಣ್ಣ, ಅಬಕಾರಿ ನಿರೀಕ್ಷಕರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಾನು ದಿನಾಂಕ 05-04-2019 ರಂದು ಸಂಜೆಃ 7.15 ಗಂಟೆ ಸುಮಾರಿಗೆ ನಾವುಗಳು ಸೈದಾಪೂರ ಕ್ರಾಸ್ ಹತ್ತಿರ ಗಸ್ತು ಮಾಡುತ್ತಿದ್ದಾಗ ಸೈದಾಪೂರದಿಂದ ಮಾದ್ವಾರ ಗ್ರಾಮದ ಕಡೆಗೆ ಬೈಕನ ಮೇಲೆ ಅಕ್ರಮ ಮದ್ಯ ಸಾಗಾಟ ನಡೆದಿರುವ ಬಗ್ಗೆ ನನಗೆ ಮಾಹಿತಿ ಬಂದಿರುತ್ತದೆ. ನಾವು ತಕ್ಷಣ ನೀಲಹಳ್ಳಿ ಕ್ರಾಸ್ ಹತ್ತಿರ ಹೋಗಿ ನಿಂತುಕೊಂಡೇವು. ನಂತರ ಚಾಸಾಃ 3 ರವರ ಸಹಾಯದಿಂದ ಚಾಸಾಃ 2 ರವರನ್ನು ಕರೆಯಿಸಿ ಪಂಚರನ್ನಾಗಿ ಬರಮಾಡಿಕೊಂಡೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 09-ಚಾಸಾ-1/ಪ್ರಾಸಾ-4 ರವರು ಮುಂದುವರೆದು, ನಂತರ 2-3 ಜನ ದಾರಿ ಹೋಕರನ್ನು ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದು ಅವರುಗಳು ಸಹಕರಿಸಿದ ಕಾರಣ ಚಾಸಾಃ 3 ರವರನ್ನು ಇನ್ನೊಬ್ಬ ಪಂಚನನ್ನಾಗಿ ನೇಮಕ ಮಾಡಿಕೊಂಡಿದ್ದೇವು. ನಂತರ ಸೈದಾಪೂರ ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿವುದು ಕಂಡುಬಂದಿದ್ದು ನಾವುಗಳು ಅದನ್ನು ತಡೆದು ನಿಲ್ಲಿಸಿದ್ದೇವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 10-ಚಾಸಾ-1/ಪ್ರಾಸಾ-4 ರವರು ಮುಂದುವರೆದು, ಬೈಕನಲ್ಲಿ ಇಬ್ಬರು ವ್ಯಕ್ತಿಗಳು ಇದ್ದು ಹಿಂಬದಿ ಸವಾರನ ಕೈಯಲ್ಲಿ ಒಂದು ರಟ್ಟಿನ ಪೆಟ್ಟಿಗೆ ಇತ್ತು. ನ್ಯಾಯಾಲಯದಿಂದ ವಾರೆಂಟ್ ಪಡೆದುಕೊಳ್ಳಲು ಸಮಯಾವಕಾಶ ಇಲ್ಲದಿರುವುದರಿಂದ ಸ್ಥಳದಲ್ಲಿ ಶೋಧನಾ ಆಧಾರ ಪತ್ರ ತಯಾರಿಸಿಕೊಂಡು ಪರಿಶೀಲನೆ ಮಾಡಲಾಗಿ ರಟ್ಟಿನ ಪೆಟ್ಟಿಗೆಯಲ್ಲಿ 330 ಮಿಲಿಯ 24 ಬೀಯರ ಬಾಟಲಿಗಳು ಹಾಗೂ ಬೈಕನ ಪೆಟ್ರೋಲ್ ಟ್ಯಾಂಕಿನ ಮೇಲೆ 1 ಚೀಲದಲ್ಲಿ ಸುಮಾರು 10 ಲೀಟರ

ಕಲಬೆರಿಕೆ ಸೇಂದಿ ಇರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 11-ಚಾಸಾ-1/ಪ್ರಾಸಾ-4 ರವರು ಮುಂದುವರೆದು, ಬೈಕ ಕಪ್ಪು ಬಣ್ಣದ ಕೆಎ-02-ಎಚ್ ಎಮ್-4429 ಸಂಖ್ಯೆಯ ಹೀರೊ ಪ್ಯಾಶನ್ ಆಗಿರುವುದು ಕಂಡುಬಂದಿರುತ್ತದೆ. ಆರೋಪಿತರು ತಮ್ಮ ಹತ್ತಿರ ಮದ್ಯ ಹಾಗೂ ಸೇಂದಿ ಸಾಗಾಟ ಮಾಡಲು ಪರವಾನಿಗೆ ಪತ್ರ ಇಲ್ಲ ಎಂದು ತಿಳಿಸಿದ್ದರು. ಆರೊಪಿತರನ್ನು ವಿಚಾರಿಸಲಾಗಿ ತಮ್ಮ ಹೆಸರು ಮಲ್ಲಯ್ಯ ಹಾಗೂ ಬನ್ನಪ್ಪ ಇಬ್ಬರೂ ಸಾಃ ಕಾಳಬೆಳಗುಂದಿ ಎಂದು ತಿಳಿಸಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 12-ಚಾಸಾ-1/ಪ್ರಾಸಾ-4 ರವರು ಮುಂದುವರೆದು, ನಂತರ ದೊರೆತ ಮು. ಮಾ. ದಿಂದ 1 ಲೀಟರ ಸೇಂದಿಯನ್ನು ಹಾಗೂ 1 ಬೀಯರ ಬಾಟಲಿಯನ್ನು ರಾಸಾಯನಿಕ ಪರೀಕ್ಷೆಗೆ ಮಾದರಿಯಾಗಿ ತೆಗೆದುಕೊಂಡಿದ್ದೇನು. ಸ್ಥಳದಲ್ಲಿ ಸಂಜೆಃ 7.30 ರಿಂದ 8.30 ರವರೆಗೆ ಪಂಚನಾಮೆ ಮಾಡಿ ಆರೋಪಿತರು, ಬೈಕ ಹಾಗೂ ಮದ್ಯ ಮತ್ತು ಸೇಂದಿಯನ್ನು ವಶಕ್ಕೆ ಪಡೆದು ಕಚೇರಿಗೆ ಬಂದು ಸರಕಾರದ ಪರವಾಗಿ ದೂರು ದಾಖಲಿಸಿಕೊಂಡಿದ್ದೇನು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 13-ಚಾಸಾ-1/ಪ್ರಾಸಾ-4 ರವರು ಮುಂದುವರೆದು, ದಿಃ 04.05.2019 ರಂದು ಈ ಪ್ರಕರಣದ ಮಾದರಿ ಮು. ಮಾಲನ್ನು ಚಾಸಾಃ4 ರವರ ಮೂಲಕ ರಾಸಾಯನಿಕ ಪರೀಕ್ಷೆಗಾಗಿ ರಾಯಚೂರಿನ ಪ್ರಾದೇಶಿಕ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಕಳುಹಿಸಿ ನಂತರ ದಿಃ 22.05.2019 ರಂದು ವರದಿ ಪಡೆದುಕೊಂಡು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೇನು. ನಂತರ ನನ್ನ ವರ್ಗಾವಣೆ ಆಗಿದ್ದರಿಂದ ಅಬಕಾರಿ ನೀರಿಕ್ಷಕರಾಗಿದ್ದ ಪ್ರಕಾಶ ಮಾಕೊಂಡರವರಿಗೆ ಸಂಪೂರ್ಣ ಕಾರ್ಯಾಭಾರ ಒಪ್ಪಿಸಿದ್ದೇನು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 14- ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 15- ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂ ಹೇಳುವುದು ಇದೆಯಾ?

1 ಮತ್ತು 2 ನೇ ಆರೋಪಿತರ ಉತ್ತರಃ

ಪ್ರಃ 16- ನಿಮಗೆ ಈ ಪ್ರಕರಣದಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆಗಳನ್ನು ಸಲ್ಲಿಸುವುದು ಇದೆಯಾ?

1 ಮತ್ತು 2 ನೇ ಆರೋಪಿತರ ಉತ್ತರಃ

(ಮೇಲ್ಕಾಣಿಸಿದ ಸಾಕ್ಷಿದಾರರ ಹೇಳಿಕೆಗಳನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ಓದಿ ಹೇಳಲಾಯಿತು.)

ದಿನಾಂಕಃ 11.05.2026.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ..ದಂ.ಗಳು, ಯಾದಗಿರಿ.